ದ. ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೂತನ ಕಾಲೇಜುಗಳ ಪ್ರಾರಂಭ

100 (44) : ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತೆಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೂತ ಸರ್ಕಾರಿ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆಯೇ;

ಆ) ನಿರ್ಧರಿಸಿದ್ದಲ್ಲಿ, ಈ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ;

ಇ) ಸದರಿ ಜಿಲ್ಲೆಗಳಲ್ಲಿ ಎಷ್ಟು ಖಾಸಗಿ ಸಂಸ್ಥೆಯವರು ನೂತನ ಕಾಲೇಜುಗಳನ್ನು ಸ್ಥಾಪಿಸಲು ಅರ್ಜಿ ಸಲ್ಲಿಸಿದ್ದಾರೆ; ಹಾಗೂ ಅವರಿಗೆ ಅನುಮತಿಯನ್ನು ಯಾವಾಗ ನೀಡಲಾಗುವುದು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 17 ಅರ್ಜಿಗಳು ಸ್ವೀಕೃತಗೊಂಡಿವೆ. ವಿಶ್ವವಿದ್ಯಾಲಯದ ಷರತ್ತುಗಳನ್ನು ಪೂರೈಸಿದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡು ಅನುಮೋದಿಸಲಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಶುವೈದ್ಯರ ಖಾಲಿ ಹುದ್ದೆಗಳ ಭರ್ತಿ

101 (265) : ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಶುವೈದ್ಯಕೀಯ ಇಲಾಖೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು ಎಷ್ಟು;

ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಸದರಿ ಪಶುವೈದ್ಯ ಆಸ್ಪತ್ರೆಗಳಿಗೆ ಸರಬರಾಜು ಮಾಡುವ ಔಷಧಿಗಳು ಸಮರ್ಪಕವಾಗಿ ವಿತರಣೆಯಾಗುತ್ತಿದೆಯೇ;

ಈ) ಆಸ್ಪತ್ರೆಗಳ ಅಗತ್ಯಕ್ಕೆ ತಕ್ಕಂತೆ ಔಷಧಿಗಳು ವಿತರಣೆಯಾಗುತ್ತಿಲ್ಲವೆಂಬುದು ನಿಜವೇ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಅ) 32

ಆ) ಸದ್ಯದಲ್ಲೇ ರಾಜ್ಯದಾದ್ಯಂತ 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇ) ಹೌದು.

ಈ) ಹೌದು.

ಔಷಧಿಗಳ ಅವಶ್ಯಕತೆ ಸರಬರಾಜುಕ್ಕಿಂತ ಹೆಚ್ಚಿದೆ.